**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**<u>ಸಿ.ಸಿ.ಸಂಖ್ಯೆ: 773/2018</u>**

**ಪಿರ್ಯಾದಿ :** ಸರ್ಕಾರದ ಪರಃ ಬಿಳಿಗೆರೆ ಪೊಲೀಸರು

**ವಿರುದ್ಧ**

**ಆರೋಪಿತರು :** ಮಹೇಶ ಉ. ಮ್ಯಾಜಿಕ್, ಬಿನ್ ಬಸವನಾಯಕ, 30 ವರ್ಷ, ಹೆಡತಲೆ ಗ್ರಾಮ, ನಂಜನಗೂಡು ತಾಲ್ಲೂಕು.

**<u>ದೋಷಾರೋಪಣೆ</u>**

*ಶ್ರೀ ಕಿಶೋರ್ ಕುಮಾರ್ ಎಂ., 1 ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ಈ ಪ್ರಕರಣದ ಚಾಸಾ-1 ರವರು ಮತ್ತು ಪ್ರಕರಣದ ಆರೋಪಿಯು ಫಿರ್ಯಾದಿಗೆ ತಿಳಿದಿರುವ ವ್ಯಕ್ತಿಯಾಗಿರುತ್ತಾನೆ.

ಚಾಸಾ-1 ರವರು ತಮ್ಮ ವಾಸದ ಮನೆಯ ಬೀರುವಿನಲ್ಲಿ ಸುಮಾರು 10 ಗ್ರಾಂ ತೂಕದ ಒಂದು ಜೊತೆ ಹ್ಯಾಂಗಿಗ್ಸ್, 6 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, ಇವುಗಳನ್ನು ಇಟ್ಟಿದ್ದು ಇವುಗಳ ಅಂದಾಜು ಬೆಲೆ ರೂ.24,000/-ಗಳಾಗಿರುತ್ತದೆ. ದಿನಾಂಕಃ 14.09.2017 ರಂದು ಗುರುವಾರ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಲ್ಲೂಪುರ ಗ್ರಾಮದಲ್ಲಿ ಚಾಸಾ-1 ರವರ ಮನೆಯಲ್ಲಿ ಆರೋಪಿತರಾದ ನೀವು ಟಿ.ವಿ. ನೋಡುತ್ತಾ ಕುಳಿತ್ತಿದ್ದು, ಚಾಸಾ-1 ರವರು ಟಿ.ವಿ. ನೋಡಿಕೊಂಡು ಮನೆಯ ಬಾಗಿಲು ಹಾಕಿಕೊಂಡು ಹೋಗುವಂತೆ ಆರೋಪಿಗೆ ತಿಳಿಸಿ ತನ್ನ ಕೆಲಸಕ್ಕೆ ಹೋದ ನಂತರ ಚಾಸಾ-1 ರವರ ಬೀರುವಿನಲ್ಲಿದ್ದ ಸುಮಾರು ರೂ.24,000/- ಬೆಲೆ ಬಾಳುವ 10 ಗ್ರಾಂ ತೂಕದ ಒಂದು ಜೊತೆ ಹ್ಯಾಂಗಿಗ್ಸ್, 6 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, ಒಟ್ಟು 16 ಗ್ರಾಂ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿಕೊಂಡು ಹೋಗಿ ಹ್ಯಾಂಗಿಗ್ಸ್ ಅನ್ನು ಚಾಸಾ-7 ರವರಲ್ಲಿ ಗಿರವಿ ಇಟ್ಟಿದ್ದು ಮತ್ತು ಓಲೆಗಳನ್ನು ಚಾಸಾ-6 ರವರಲ್ಲಿ ಗಿರವಿ ಇಟ್ಟಿದ್ದ ಕಾರಣ, ಭಾರತ ದಂಡ ಸಂಹಿತೆ ಕಲಂ 380 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಪ್ರಶ್ನೆ-1 ಃ ಮೇಲ್ಕಂಡ ಎಲ್ಲಾ ಆರೋಪಣೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?

ಉತ್ತರ ಃ

ಪ್ರಶ್ನೆ-2 ಃ ಸದರೀ ಆರೋಪಣೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ ಃ

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿಗಳು ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 02.08.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

ಸಹಿ/-

**1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**
ನಂಜನಗೂಡು